ಪಿ ಡಬ್ಲ್ಯೂ : 1

ದಿನಾಂಕ 20-02-2020 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಪಿಆರ್ ಹೆಚ್ ವಕೀಲರಿಂದಃ

ದಾವಾ ಆಸ್ತಿಗೆ ಹಾಗೂ ವಾದಿ ಪ್ರತಿವಾದಿಗೆ ಅನ್ವಯಿಸದ ದಾಖಲೆಗಳನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ನಿಡಿ-3 ರಲ್ಲಿಕೆ ಜೆ ಪಿ ಆಧಾರದ ಮೇಲೆ ದಾಖಲಿದೆ ಹಾಗೂ ನಿಪಿ-20 ರಲ್ಲಿ ಲೆಔಟ್ ಪ್ರಕಾರ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಮಾನ್ಯವಾಗಿ ಪರಿವರ್ತನೆಗೊಂಡ ಜಮೀನಿನಲ್ಲಿ ನಿವೇಶನಗಳನ್ನು ರಚನೆ ಮಾಡಿದ್ದಲ್ಲಿ ಅದು ಕೆಜೆಪಿ ಯಿಂದ ಅನುಮೋದನೆ ಪಡೆದುಕೊಳ್ಳಬೇಕು ಎಂದರೆ ಸರಿ. ನಿಪಿ-20 ರಲ್ಲಿ ಕೆಜೆಪಿ ಯಿಂದ ಅನುಮೋದಗೊಂಡ ವಕ್ಕಣೆ ಇಲ್ಲ ಎಂದರೆ ಸರಿ, ಸಾಕ್ಷಿ ಆ ಸಮಯದಲ್ಲಿ ಕೆ ಜೆ ಪಿ ಇಲ್ಲ ಎನ್ನುತ್ತಾರೆ. ಕೆಜೆಪಿ ಅಸ್ಥಿತ್ವದಲ್ಲಿಲ್ಲ ಎಂಬುದನ್ನು ತೋರಿಸಲು ಡ ಉತಾರ ಸಲ್ಲಿಸಿದ್ದೇನೆ. ಸಾಕ್ಷಿ ಕಡತಗಳನ್ನು ನೋಡಿ ಆ ಸಮಯದಲ್ಲಿ ಕೆಜೆಪಿ ಅಸ್ಥಿತ್ವದಲ್ಲಿಲ್ಲ ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ ಎನ್ನುತ್ತಾರೆ. ನಿಪಿ-14 ರಿಂದ 22 ರಂತಿರುವ ದಾಖಲೆಗಳು ಅಸಮಂಜಸವಾಗಿವೆ ಎಂದರೆ ಸರಿಯಲ್ಲ. ಪ್ರಕರಣವನ್ನು ಮುಂದುಡುವ ಉದ್ದೇಶಕ್ಕಾಗಿ ಸದರಿ ದಾಖಲೆಗಳನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.